ಸೃಜನಿ

**SRUJANI: Indian Journal of Innovative Research and Development (SIJIRD)**
Volume-1 Issue 5, November-December 2022, Pp. 41- 49
Bi-Monthly, Peer-Reviewed, Open Access, Indexed Journal

**I S S N: 2583-3510**
**S I R D F**
**J O U R N A L S**
editor@srujani.in
www.srujani.in

# ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ನಿರ್ವಹಣೆಯಲ್ಲಿ ಪರಿವೀಕ್ಷಣಾ ಮಂದಿರಗಳ ಪಾತ್ರ

**ಶ್ರೀನಿವಾಸ ಮೂರ್ತಿ ಎ. ಟಿ* & ಡಾ. ಎ. ಕೆ. ದೊಡ್ಡಮನಿ ಲೋಕರಾಜ್****

*ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.
**ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ.

***Abstract:***

*ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು ದೈಹಿಕವಾಗಿ ಹಾಗೂ ಮಾನಸಿಕವಾಗಿ ಪ್ರಬುದ್ಧರಾಗಿದ್ದರೂ ಭಾವಾನಾತ್ಮಕವಾಗಿ ಸ್ಥಿರವಾಗಿರುವುದಿಲ್ಲ. ಪೋಷಕರ ನಿಯಂತ್ರಣ ಹಾಗೂ ಸ್ವಾತಂತ್ರ್ಯವಿರದ ಕಾರಣ ಮಕ್ಕಳನ್ನು ನಿರ್ಬಂಧಿಸುವುದರಿಂದ ಅವರು ದಾರಿ ತಪ್ಪುವ ಸಾಧ್ಯತೆ ಹೆಚ್ಚಿರುತ್ತದೆ ಆದುದರಿಂದ ಸರಿಯಾದ ಕಾಳಜಿ ರಕ್ಷಣೆ ಹಾಗೂ ಶಿಸ್ತಿನ ಅಗತ್ಯತೆ ಇರುತ್ತದೆ. ಅಂತಹ ಮಕ್ಕಳನ್ನು ಶಿಕ್ಷೆಗೆ ಗುರಿ ಪಡಿಸದೆ, ಅಪರಾಧಿ ಎಂದು ಪರಿಗಣಿಸದೆ ಸರಿಯಾದ ಮಾರ್ಗದರ್ಶನ ನೀಡುವ ಅಗತ್ಯವಿದೆ. ಅಪರಾಧ ಮಾಡಿದ ಮಕ್ಕಳು ವಾಸ್ತವವಾಗಿ ಅಪರಾಧಿಗಳಾಗಿರದೇ ಅವರನ್ನು ಸುಧಾರಿಸುವ ಕ್ರಮ ಅನುಸರಿಸಬೇಕು. ಈ ಹಿನ್ನಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ನಿರ್ವಹಣೆಯಲ್ಲಿ ಪರಿವೀಕ್ಷಣಾ ಮಂದಿರಗಳ ಪಾತ್ರವನ್ನು ವಿಶ್ಲೇಷಿಸಲಾಗಿದೆ.*

**Keywords:** *ಕಾನೂನು, ಮಕ್ಕಳು, ಪರಿವೀಕ್ಷಣಾ ಮಂದಿರಗಳು, ಎನ್‌ಸಿಆರ್‌ಬಿ, ಬಾಲ ನ್ಯಾಯ ಕಾಯ್ದೆ.*

## ಪೀಠಿಕೆ

ಮಕ್ಕಳು ಒಂದು ರಾಷ್ಟ್ರ ಹಾಗೂ ಸಮಾಜದ ಅತ್ಯಮೂಲ್ಯ ಸಂಪತ್ತು ಹಾಗೂ ಆಸ್ತಿ ಇದ್ದಂತೆ ಮಕ್ಕಳ ಸಂಪೂರ್ಣ ವ್ಯಕ್ತಿತ್ವದ ಬೆಳವಣಿಗೆಯನ್ನು ಸಂರಕ್ಷಿಸುವುದು ರಾಜ್ಯದ ಪ್ರಮುಖ ಕರ್ತವ್ಯವೂ ಕೂಡಾ ಆಗಿದೆ. ಪ್ರತಿಯೊಂದು ಸಮಾಜವೂ ಪ್ರತಿಯೊಬ್ಬ ವ್ಯಕ್ತಿಯ ಭವಿಷ್ಯದಲ್ಲಿ ಜವಾಬ್ದಾರಿಯುತ ನಾಗರಿಕರಾಗಿ ಬೆಳೆಯಬೇಕೆಂಬ ನಿರೀಕ್ಷೆಯನ್ನು ಹೊಂದಿರುತ್ತದೆ. ಈ ನಿಟ್ಟಿನಲ್ಲಿ ಎಳೆಯ ಹದಿಹರೆಯದ ವಯಸ್ಸಿನ ಮಕ್ಕಳ ಸೂಕ್ತವಾದ ರಕ್ಷಣೆ ಹಾಗೂ ಕಾಳಜಿಯ ಅಗತ್ಯವಿದೆ. ಒಂದು ರಾಷ್ಟ್ರದ ಯೋಗಕ್ಷೇಮ ಮಕ್ಕಳು ಹೇಗೆ ಬೆಳೆಯುತ್ತಾರೆ ಮತ್ತು ಅಭಿವೃದ್ಧಿ ಹೊಂದುತ್ತಾರೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ.

ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಸಮಸ್ಯೆಯು ಜಾಗತಿಕ ಸಾಮಾಜಿಕ ಸಮಸ್ಯೆಯಾಗಿದೆ. ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಸಮಸ್ಯೆಯು ವೈಯಕ್ತಿಕ ಅಪವರ್ತನೆಯ ಅಥವಾ ವಿಚಲನೆಯ ಸಂಕೇತವಾಗಿದೆ. ಈ ಸಮಸ್ಯೆಯು ಜಗತ್ತಿನಾದ್ಯಂತ ಸಾರ್ವತ್ರಿಕವಾಗಿ, ವಿಭಿನ್ನ ರೂಪಗಳಲ್ಲಿ ಕಂಡುಬರುವ, ವೈಯಕ್ತಿಕ ವಿಘಟನೆಯ ಹಾಗೂ ಸಾಮಾಜಿಕ

***Please cite this article as:*** ಶ್ರೀನಿವಾಸ ಮೂರ್ತಿ ಎ. ಟಿ & ಎ. ಕೆ. ದೊಡ್ಡಮನಿ ಲೋಕರಾಜ್ (2022). ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ನಿರ್ವಹಣೆಯಲ್ಲಿ ಪರಿವೀಕ್ಷಣಾ ಮಂದಿರಗಳ ಪಾತ್ರ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(5), 41–49.

ವಿಫಲತೆಯ ಪ್ರತಿಬಿಂಬವೂ ಆಗಿದೆ. ಪ್ರಸಕ್ತ ಸಮಾಜವೂ ಈ ಪಿಡುಗನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕಾದ ಅವಶ್ಯಕತೆಯಿದೆ.

2011ರ ಜನಗಣತಿಯ ಪ್ರಕಾರ ದೇಶದ ಜನಸಂಖ್ಯೆಯು ಸುಮಾರು 121 ಕೋಟಿಯಲ್ಲಿ 18 ವಯಸ್ಸಿನೊಳಗಿನ ಮಕ್ಕಳ ಜನಸಂಖ್ಯೆ ಅಂದಾಜು 472 ದಶಲಕ್ಷ ಇದ್ದು, ಒಟ್ಟು ಜನಸಂಖ್ಯೆಯ ಶೇಕಡಾ 39% ರಷ್ಟು ಇದ್ದಾರೆ. ಕಿಶೋರಾವಸ್ಥೆಯಲ್ಲಿರುವ ಮಕ್ಕಳು ಅಂದರೆ 16 ಮತ್ತು 18 ವಯಸ್ಸಿಗೂ ಕಡಿಮೆ ವಯಸ್ಸಿನ ಮಕ್ಕಳು ಆಧುನೀಕರಣ, ಕೈಗಾರೀಕರಣ, ನಗರೀಕರಣಗಳ ಸುಳಿಯಲ್ಲಿರುವ ಸಮಾಜಗಳಲ್ಲಿ ಈ ಸಮಸ್ಯೆಯು ಹೆಚ್ಚು ಗಂಭೀರವಾಗಿದೆ.

ಹುಟ್ಟುವಾಗ ಮಕ್ಕಳು ಮುಗ್ಧರಾಗಿರುತ್ತಾರೆ ಅದಾಗ್ಯೂ ಅನೇಕ ಅಂಶಗಳಿಂದಾಗಿ ಅನೇಕ ಮಕ್ಕಳು ಅಪರಾಧವನ್ನು ಎಸಗುವ ಮೂಲಕ ಕಾನೂನಿನ ಸಂಘರ್ಷಕ್ಕೆ ಸಿಲುಕುತ್ತಾರೆ. ಭಾವನಾತ್ಮಕ ಪ್ರಕೋಪ, ಕಳ್ಳತನ, ಮಾದಕ ದ್ರವ್ಯ ಸೇವನೆ, ಹಿಂಸಾತ್ಮಕ ನಡವಳಿಕೆಗಳನ್ನು ಜೀವನದ ಆರಂಭದಲ್ಲಿಯೇ ಕಲಿಯಲಾಗುತ್ತದೆ. ಪೋಷಕರು ಕುಟುಂಬ ಸದಸ್ಯರು ಹಾಗೂ ಮಕ್ಕಳನ್ನು ನೋಡಿಕೊಳ್ಳುವ ಇತರರು ಹಿಂಸಾಚಾರವನ್ನು ಬಳಸದೆ ಅವರ ಭಾವನೆಗಳನ್ನು ಬದಲಾಯಿಸಬಹುದು.

**ಅಧ್ಯಯನದ ಉದ್ದೇಶಗಳು**

- ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಸುಧಾರಣೆಯಲ್ಲಿ ಪರಿವೀಕ್ಷಣಾ ಮಂದಿರಗಳು ನಿರ್ವಹಿಸುವ ಪಾತ್ರವನ್ನು ವಿಶ್ಲೇಷಿಸುವುದು.
- ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಏಳಿಗೆಗಾಗಿ ಪರಿವೀಕ್ಷಣಾ ಮಂದಿರಗಳು ನೀಡಿರುವ ಸೌಲಭ್ಯಗಳ ಬಗ್ಗೆ ತಿಳಿಯುವುದು.

**ಅಧ್ಯಯನದ ವಿಧಾನಗಳು**

ಪ್ರಸ್ತುತ ಅಧ್ಯಯನಕ್ಕೆ ಬೆಂಗಳೂರು ನಗರ ಜಿಲ್ಲೆಯ ಪರಿವೀಕ್ಷಣಾ ಗೃಹಗಳನ್ನು ಆಯ್ಕೆ ಮಾಡಿಕೊಂಡು ಪ್ರಾಥಮಿಕ ಮಾಹಿತಿ ಮೂಲಗಳಾದ ಅವಲೋಕನ, ಸಂದರ್ಶನ, ಪ್ರಶ್ನಾವಳಿ, ಗುಂಪುಚರ್ಚೆ, ಕ್ಷೇತ್ರಕಾರ್ಯ ಮುಂತಾದ ಸಂಶೋಧನಾ ತಂತ್ರಗಳನ್ನು ಬಳಸಿ ಅಗತ್ಯ ದತ್ತಾಂಶವನ್ನು ಸಂಗ್ರಹಿಸಲಾಗಿದೆ. ಅನುಷಂಗಿಕ ಮಾಹಿತಿಯನ್ನು ಗ್ರಂಥಗಳು, ಪುಸ್ತಕಗಳು, ನಿಯತಕಾಲಿಕೆಗಳು, ಪ್ರಬಂಧಗಳು, ಲೇಖನಗಳು, ವೃತ್ತಪತ್ರಿಕೆಗಳು, ಅಧಿಕೃತ ವರದಿಗಳು, ಅಂಕಿಸಂಖ್ಯೆಗಳು, ಅಂತರ್ಜಾಲ ಮೊದಲಾದ ಮೂಲಗಳಿಂದ ಸಂಗ್ರಹಿಸಲಾಗಿದೆ.

**ಪರಿಕಲ್ಪನಾತ್ಮಕ ವ್ಯಾಖ್ಯಾನ**

ಬಾಲ ನ್ಯಾಯ ಕಾಯ್ದೆ 2015ರಲ್ಲಿ ಬಾಲಾಪರಾಧಿ ಎಂಬ ಪರಿಕಲ್ಪನೆಯನ್ನು ಮರು ವ್ಯಾಖ್ಯಾನಿಸಲಾಗಿದೆ. 'ಬಾಲಾಪರಾಧಿ' ಎಂಬ ಪರಿಕಲ್ಪನೆಯ ಬದಲಾಗಿ 'ಮಗು' ಅಥವಾ 'ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು' ಎಂದು ನಾಮಕರಣ ಮಾಡಲಾಗಿದೆ. 'ಬಾಲಾಪರಾಧಿ' ಎಂಬ ಪದ/ಪರಿಕಲ್ಪನೆಯಲ್ಲಿರುವ ಋಣಾತ್ಮಕ ಅರ್ಥವನ್ನು ತೆಗೆದು ಹಾಕುವ ಸಲುವಾಗಿ ಬಾಲ ನ್ಯಾಯ ಕಾಯ್ದೆ 2015 ನಲ್ಲಿ ಪ್ರಸ್ತಾಪಿಸಲಾಗಿದೆ.

ಬಾಲ ನ್ಯಾಯ ಕಾಯ್ದೆ 2015 ರಲ್ಲಿ ಎರಡು ದೃಷ್ಟಿಕೋನದಲ್ಲಿ ಮಗು ಅಥವಾ ಮಕ್ಕಳು ಎಂಬ ಪರಿಕಲ್ಪನೆಯನ್ನು ಅರ್ಥೈಸಲಾಗಿದೆ ಒಂದು 'ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು' ಹಾಗೂ

ಎರಡನೇಯದಾಗಿ ಸಂರಕ್ಷಣೆ ಮತ್ತು ಪಾಲನೆ–ಪೋಷಣೆಯ ಅಗತ್ಯವುಳ್ಳ ಮಗು ಎಂಬರ್ಥದಲ್ಲಿ ವಿವರಿಸಲಾಗಿದೆ ಬಾಲಾ ನ್ಯಾಯ ಕಾಯ್ದೆ 2015ರ ಭಾರತ ಸರ್ಕಾರದ ಪ್ರಕಾರ ಸೆಕ್ಷನ್ 2(12) ಪ್ರಕಾರ ಮಗು ಎಂದರೆ ಹದಿನೆಂಟು ವರ್ಷ ಪೂರ್ಣಗೊಳಿಸದ ವ್ಯಕ್ತಿ ಮತ್ತು ಸೆಕ್ಷನ್ 2(13) ಪ್ರಕಾರ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಗು ಎಂದರೆ ಆಪಾದಿತ ಅಥವಾ ಅಪರಾಧ ಎಸಗಿದ ದಿನಾಂಕದಂದು ಹದಿನೆಂಟು ವರ್ಷಗಳನ್ನು ಪೂರ್ಣಗೊಳಿಸದ ಮಗು, ಸೆಕ್ಷನ್ 2(21) ಮಕ್ಕಳ ಆರೈಕೆ ಸಂಸ್ಥೆ ಎಂದರೆ ಮಕ್ಕಳ ಮನೆ, ತೆರೆದ ಆಶ್ರಯ, ವೀಕ್ಷಣಾ ಮನೆ, ವಿಶೇಷ ಮನೆ, ಸುರಕ್ಷತೆಯ ಸ್ಥಳ, ವಿಶೇಷ ದತ್ತು ಸಂಸ್ಥೆ ಮತ್ತು ಮಕ್ಕಳಿಗೆ ಆರೈಕೆ ಮತ್ತು ವಿಶೇಷ ದತ್ತು ಸಂಸ್ಥೆ ಮತ್ತು ಮಕ್ಕಳಿಗೆ ಆರೈಕೆ ಮತ್ತು ರಕ್ಷಣೆ ಒದಗಿಸಲು ಈ ಕಾಯ್ದೆಯಡಿ ಮಾನ್ಯತೆ ಪಡೆದ ಸೌಲಭ್ಯ ಸೇವೆಗಳು. ಸೆಕ್ಷನ್ 2(35) ಬಾಲಾಪರಾಧಿ ಎಂದರೆ ಹದಿನೆಂಟು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗು.

ಸಂರಕ್ಷಣೆ ಮತ್ತು ಪಾಲನ ಪೋಷಣೆಯ ಅಗತ್ಯವುಳ್ಳ ಮಗು (Child in need of Care and protection) ಎಂದರೆ (1)ಯಾವುದೇ ನಿವಾಸ ಅಥವಾ ನೆಮ್ಮದಿಯ ನೆಲೆಯಿಲ್ಲದ ಮತ್ತು ಮೇಲ್ನೋಟಕ್ಕೆ ಜೀವನ ನಿರ್ವಹಣೆಗೆ ಯಾವುದೇ ಮಾರ್ಗವಿಲ್ಲದ, (2) ಜಾರಿಯಲ್ಲಿರುವ ಯಾವುದೇ ಕಾರ್ಮಿಕ ಕಾಯಿದೆಗಳನ್ನು ಉಲ್ಲಂಘಿಸಿ ಕೆಲಸ ನಿರ್ವಹಿಸುತ್ತಿರುವ ಅಥವಾ ಭಿಕ್ಷೆ ಬೇಡುತ್ತಿರುವ ಅಥವಾ ಬೀದಿಯಲ್ಲಿ ವಾಸಿಸುತ್ತಿರುವ (3) ಯಾವುದೇ ವ್ಯಕ್ತಿಯೊಂದಿಗೆ ವಾಸಿಸುತ್ತಿರುವ (ಅಂತಹ ವ್ಯಕ್ತಿ ಮಗುವಿನ ಪೋಷಕನಿರಬಹುದು ಅಥವಾ ಅಲ್ಲದಿರಬಹುದು) ಮತ್ತು ಅಂತಹ ವ್ಯಕ್ತಿಯು ಮಗು ಅಥವಾ ಮಕ್ಕಳನ್ನು ಹಿಂಸೆ, ಶೋಷಣೆ, ಕೊಲೆ ಮಾಡುವ ಸಂಭವವಿರುತ್ತದೆ. ಹೀಗೆ ವಿಭಿನ್ನ ಅರ್ಥದಲ್ಲಿ ವಿವರಿಸಲಾಗಿದೆ.

**ಸಾಹಿತ್ಯಾವಲೋಕನ**

ಮಕ್ಕಳ ಹಕ್ಕುಗಳ ಕುರಿತ ವಿಶ್ವಸಂಸ್ಥೆಯ ಸಮಾವೇಶ (1989) ದಲ್ಲಿ 18 ವರ್ಷದೊಳಗಿನ ವ್ಯಕ್ತಿಯನ್ನು ಮಗು ಎಂದು ವ್ಯಾಖ್ಯಾನಿಸುತ್ತದೆ. ಪೋಷಕರ ಮತ್ತು ಕಟುಂಬದ ಪ್ರಾಥಮಿಕ ಪಾತ್ರವೆಂದರೆ ಮಕ್ಕಳ ಪಾಲನೆ ಮತ್ತು ರಕ್ಷಣೆ ಎಂದು ತಿಳಿಸಿದೆ. ಜೊತೆಗೆ ಈ ಕರ್ತವ್ಯವನ್ನು ನಿರ್ವಹಿಸುವಲ್ಲಿ ರಾಜ್ಯದ ಪಾತ್ರವನ್ನು ತಿಳಿಸಿದೆ.

ಸುಗತ ಮೆನನ್ (2000) ರವರು ಜುವೆನೈಲ್ ಡೆಲಿನ್ಕ್ವೆನ್ಸಿ ಎಂಬುದು ಮಕ್ಕಳ ಸಾಮಾಜಿಕ ವಿರೋಧಿ ಅಥವಾ ಕಾನೂನುಬಾಹಿರ ನಡವಳಿಕೆಯನ್ನು ಸೂಚಿಸುತ್ತದೆ ಅಥವಾ ಹದಿಹರೆಯದ ಮಕ್ಕಳು, ಮಾಡುವ ಅಪರಾಧಗಳು ಇದರ ಅಡಿಯಲ್ಲಿ ಬರುತ್ತವೆ. ವಿಶೇಷವಾಗಿ 18 ವರ್ಷದೊಳಗಿನ ಮಕ್ಕಳು ಎಸಗಿದಾಗ ಬಾಲಾಪರಾಧಗಳು ಎಂದು ಸೂಚಿಸಲಾಗುತ್ತದೆ. ಭಾರತದಲ್ಲಿ ಬಾಲಾಪರಾಧಿಗಳನ್ನು ವಿಶೇಷ ಮನೆಗಳಲ್ಲಿರಿಸಿದಾಗ ಎಲ್ಲಾ ಮೂಲಭೂತ ಅಗತ್ಯಗಳನ್ನು ಪೂರೈಸಲಾಗುತ್ತದೆ. 2003ರ ಮಕ್ಕಳ ರಾಷ್ಟ್ರೀಯ ಚಾರ್ಟರ್ನಂತೆ ಪ್ರತಿ ಮಗುವಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸಬೇಕು.

ಬಾಲಾಪರಾಧ–ಯುವ ಜನರ ಜಾಗತಿಕ ಪರಿಸ್ಥಿತಿ ಎಂಬ ವಿಶ್ವ ಯುವ ವರದಿ(2003)ಯಲ್ಲಿ ಶೇಕಡಾ 20% ಮಕ್ಕಳು ಮತ್ತು ಹದಿಹರೆಯದವರು ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದಾರೆ ಎಂದು ಅಂದಾಜಿಸಲಾಗಿದೆ. ಕಳೆದ ಕೆಲವು ವರ್ಷಗಳಲ್ಲಿ ಸ್ಥಿರವಾಗಿ ಹೆಚ್ಚುತ್ತಿರುವ ಜನಸಂಖ್ಯೆ, ಅಪರಾಧ ಮತ್ತು ಅಪರಾಧದ ಘಟನೆಗಳ ನಡುವೆ ಬಾಲಾಪರಾಧಿಗಳ ಸಂಖ್ಯೆಯು ಹೆಚ್ಚುತ್ತಿದೆ. ಮಕ್ಕಳಲ್ಲಿ ಮಾನಸಿಕ

ಅಸ್ವಸ್ಥತೆಗೆ ಸಂಬಧಿಸಿದಂತೆ ಕಷ್ಟಕರವಾದ ಕುಟುಂಬ ವಾತಾವರಣ, ಕಡಿಮೆ ಸಾಮಾಜಿಕ–ಆರ್ಥಿಕ ಸ್ಥಿತಿ ಮತ್ತು ಕಡಿಮೆ ಪೋಷಕರ ಶಿಕ್ಷಣದ ಉಪಸ್ಥಿತಿಯನ್ನು ವಿವಿಧ ಅಧ್ಯಯನಗಳು ಬಹಿರಂಗಪಡಿಸಿವೆ.

ಆಶಾ ಬಾಜಪೈ (2003) ರವರ ಭಾರತದಲ್ಲಿ ಮಕ್ಕಳ ಹಕ್ಕುಗಳು: ಕಾನೂನು, ನೀತಿ ಮತ್ತು ಆಚರಣೆ ಎಂಬ ಗ್ರಂಥದಲ್ಲಿ ಶಾಸನಗಳು ಮತ್ತು ಕಾನೂನುಗಳು ಮಕ್ಕಳ ಸಬಲೀಕರಣಕ್ಕೆ ಒಂದು ಪ್ರಮುಖ ಸಾಧನವಾಗಿದೆ ಎಂದು ಹೇಳಿದ್ದಾರೆ. ಪ್ರಿಯಂವಥ. ಎಂ (2003) ರವರ 'ಎ ಸ್ಟಡಿ ಆನ್ ರೀ ಇಂಟಿಗ್ರೇಷನ್ ಅಫ್ ಜುವೆನೈಲ್ ಡೆಲಿಕ್ವೆಂಟ್ ಇನ್ ಟು ದ ಸೊಸೈಟಿ' ಎಂಬ ಸಂಶೋಧನೆಯಲ್ಲಿ ಬಹುಪಾಲು ಮಕ್ಕಳು (67.2%) ಬಿಡುಗಡೆಯ ನಂತರ ವಿಶೇಷ ಗೃಹಗಳಲ್ಲಿ ನೀಡುವ ವೃತ್ತಿಪರ ತರಬೇತಿ ಕಾರ್ಯಕ್ರಮಗಳಿಂದ ಯಾವುದೇ ರೀತಿಯ ಉಪಯುಕ್ತವಾಗಲಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಬಿಡುಗಡೆಯಾದ ಅಪರಾಧಿಗಳಲ್ಲಿ ಮನೆ, ಕುಟುಂಬ ಸ್ಥಿತಿ, ಆದಾಯ, ವೈವಾಹಿಕ ಸ್ಥಿತಿ ಮುಂತಾದ ಜನಸಂಖ್ಯಾ ಅಂಶಗಳು ಪುನರಾವರ್ತನೆಯ ದರದೊಂದಿಗೆ ಸಂಬಂಧ ಹೊಂದಿಲ್ಲ ಎಂದು ಕಂಡುಬಂದಿದೆ.

ದೆಹಲಿಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಜೂನ್ 2015 ರಲ್ಲಿ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಮೇಲೆ "ಏಕೆ ಮಕ್ಕಳು ಅಪರಾಧಗಳನ್ನು ಎಸಗುತ್ತಾರೆ" ಎಂಬ ಅಧ್ಯಯನವನ್ನು ನಡೆಸಿದೆ. ವರದಿಯು ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಸಾಮಾಜಿಕ–ಆರ್ಥಿಕ ಚಿತ್ರಣವನ್ನು ನೀಡುತ್ತದೆ. ಈ ಮಕ್ಕಳು ಮಾಡಿದ ಆರೋಪದ, ಅಪರಾಧದ ಸ್ವರೂಪ ಮತ್ತು ಮಕ್ಕಳನ್ನು ವಿಕೃತ ನಡವಳಿಕೆಗೆ ಕಾರಣವಾಗುವ ಅಂಶಗಳನ್ನು ವಿಶ್ಲೇಷಿಸಿದ್ದಾರೆ. ಈ ವರದಿಯು ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಜೀವನದಲ್ಲಿ ಕುಟುಂಬ, ಸಮುದಾಯ, ಶಾಲೆ/ಶಿಕ್ಷಣದ ಪಾತ್ರವನ್ನು ಹಾಗೂ ಗೆಳೆಯರ ಪ್ರಭಾವವನ್ನು ವಿಶ್ಲೇಷಣೆಗೆ ಒಳಪಡಿಸಿದೆ.

ಸೌಮೆನ್ ಆಚಾರ್ಯ, (2017) ದಿ ಸ್ಟಡಿ ಅಫ್ ಜುವೆನೆಲ್ ಡೆಲಿಕ್ವೆನ್ಸಿ ವಿಥ್ ರೆಫರೆನ್ಸ್ ಟು ಸೈಕಲಾಜಿಕಲ್ ಪರ್ಸೆಪ್ಟಿವ್ಸ್ ಇನ್ ದ ಜುವೆನೆಲ್ ಹೋಮ್ಸ್ ಆಫ್ ದೆಹಲಿ ಇವರ ಅಧ್ಯಯನವು ಬಾಲಾಪರಾಧಿಗಳ ಅಪರಾಧ ಮತ್ತು ಶಿಕ್ಷೆಗೆ ಸಂಬಂಧಿಸಿದಂತೆ ದೆಹಲಿ ಇವರ ಅಧ್ಯಯನವು ಬಾಲಾಪರಾಧಿಗಳ ಅಪರಾಧ ಮತ್ತು ಶಿಕ್ಷೆಗೆ ಸಂಬಂಧಿಸಿದಂತೆ ದೆಹಲಿ ನಗರವನ್ನು ಹೆಚ್ಚು ಶಿಕ್ಷಾರ್ಹ ಎಂದು ನಿರೂಪಿಸುವುದು ತಪ್ಪು ಎಂದು ಇದು ತೋರಿಸಿದೆ. ಸಮೀಕ್ಷೆಯಲ್ಲಿ ಪ್ರತಿಕ್ರಿಯಿಸಿದವರಲ್ಲಿ ಅರ್ಧದಷ್ಟು (58.3%) ಜನರು ತಮ್ಮ ಅಪರಾಧಕ್ಕೆ ಬಡತನವನ್ನು ಕಾರಣವೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇದು ಅವರ ಜೀವನದ ವಾಸ್ತವತೆಯನ್ನು ಪ್ರತಿನಿಧಿಸುತ್ತದೆ. ಅನಕ್ಷರತೆ (23.6%) ಮತ್ತು ನಿರುದ್ಯೋಗ (15.7%), ಇತರ ಸಮಸ್ಯೆಗಳು (2.4%) ಮುಂದಿನ ಪ್ರಮುಖ ಕಾರಣಗಳಾಗಿವೆ. ಇದು ಬಾಲಾಪರಾಧಿಗಳು ತಮ್ಮ ಸಾಮಜಿಕ ಮತ್ತು ಆರ್ಥಿಕ ಪರಿಸ್ಥಿತಿಗಲ ಬಗ್ಗೆ ಅಸಮಾಧಾನವನ್ನು ಹೊಂದಿರುವುದನ್ನು ಮತ್ತೋಮ್ಮೆ ದೃಡಪಡಿಸುತ್ತದೆ.

ವೇದ್ ಕುಮಾರಿ (2017) ಜುವೆನೈಲ್ ಜಸ್ಟೀಸ್ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯಿದೆ, 2015ರ ಸ್ಪಷ್ಟ ತಿಳುವಳಿಕೆಯನ್ನು ಒದಗಿಸುತ್ತದೆ ಮತ್ತು ಕಾಯಿದೆಯಲ್ಲಿ ಒಳಗೊಂಡಿರುವ ಪ್ರಮುಖ ನಿಬಂಧನೆಗಳ ಬಗ್ಗೆ ವ್ಯಾಖ್ಯಾನಗಳನ್ನು ಹೊಂದಿದೆ. ಲೇಖಕರು ಮಕ್ಕಳ ಹಕ್ಕುಗಳ ದೃಷ್ಟಿಕೋನದಿಂದ ಕಾಯಿದೆಯ ಅಸ್ಪಷ್ಟ ನಿಬಂಧನೆಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿದ್ದಾರೆ ಮತ್ತು ಕಾಯಿದೆಯ ಮೂಲಭೂತ ತತ್ವಗಳು ಮತ್ತು ಅಂತರಾಷ್ಟ್ರೀಯ ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು

ವ್ಯಾಖ್ಯಾನಿಸಿದ್ದಾರೆ. ಕಾಯಿದೆಯ ಅನುಷ್ಠಾನದಲ್ಲಿ ಗಮನಾರ್ಹ ಕಾಳಜಿ ಮತ್ತು ಸಾಂವಿಧಾನಿಕ ಸವಾಲುಗಳನ್ನು ಪುಸ್ತಕವು ಎತ್ತಿ ತೋರಿಸುತ್ತದೆ.

ಭಾರತದ ಸರ್ಕಾರದ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (2021) ವರದಿಯ ಪ್ರಕಾರ 2021 ರಲ್ಲಿ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಸಂಖ್ಯೆ ಒಟ್ಟು 5,828 ಪ್ರಕರಣಗಳನ್ನು ದಾಖಲಿಸಲಾಗಿದೆ, ಇದು 2020 ಕ್ಕಿಂತ 2.4% ರಷ್ಟು ಕಡಿಮೆಯಾಗಿದೆ (5,974 ಪ್ರಕರಣಗಳು). 5,828 ಪ್ರಕರಣಗಳಲ್ಲಿ ಒಟ್ಟು 7,635 ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಗಳನ್ನು ಬಂಧಿಸಲಾಗಿದೆ, ಅದರಲ್ಲಿ 6,976 ಮಕ್ಕಳಗಳನ್ನು ಐಪಿಸಿ ಪ್ರಕರಣಗಳ ಅಡಿಯಲ್ಲಿ ಬಂಧಿಸಲಾಗಿದೆ ಮತ್ತು 659 ಮಕ್ಕಳಗಳನ್ನು 2021 ರಲ್ಲಿ ಎಸ್‌ಎಲ್‌ಎಲ್ ಪ್ರಕರಣಗಳ ಅಡಿಯಲ್ಲಿ ಬಂಧಿಸಲಾಗಿದೆ. ಐಪಿಸಿ ಮತ್ತು ಎಸ್‌ಎಲ್‌ಎಲ್ ಅಪರಾಧಗಳ ಅಡಿಯಲ್ಲಿ ಬಂಧಿಸಲಾದ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಹೆಚ್ಚಿನ (76.2%) ಮಕ್ಕಳಲ್ಲಿ 2021 ರಲ್ಲಿ 16 ರಿಂದ 18 ವರ್ಷ ವಯಸ್ಸಿನವರಾಗಿದ್ದಾರೆ (7,635 ರಲ್ಲಿ 5,816).

**ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಪ್ರಕರಣಗಳ ಸಂಖ್ಯೆ (IPC+SLL) 2019–2021**

| | **2019** | **2020** | **2021** | **ಜುವೆನೈಲ್ಸ್ ಅಪರಾಧ ಒಟ್ಟು ದರ % (2021)** |
|---|---|---|---|---|
| **ಒಟ್ಟು ಭಾರತ** | 32269 | 29768 | 31170 | 7.0 |
| **ಕರ್ನಾಟಕ** | 453 | 438 | 527 | 2.7 |
| **ಬೆಂಗಳೂರು** | 162 | 171 | 177 | – |

**ಮೂಲ:** ಭಾರತದ ಸರ್ಕಾರದ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ–2021

2017 ರಲ್ಲಿ ಒಟ್ಟು 33,606 ಪ್ರಕರಣಗಳು, 2018 ರಲ್ಲಿ 31,591 ಪ್ರಕರಣಗಳು, 2019 ರಲ್ಲಿ 32,235 ಕಾನೂನಿನೂಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಪ್ರಕರಣಗಳು ವರದಿಯಾಗಿದೆ. ಭಾರತದಲ್ಲಿ ಮಕ್ಕಳ ಅಪರಾಧಿಗಳ ಒಟ್ಟು ದರ 2019ರಲ್ಲಿ 7.2% ರಷ್ಟಿತ್ತು. ಕರ್ನಾಟಕದಲ್ಲಿ ಕಾನೂನಿನೂಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಅಪರಾಧದ ಪ್ರಮಾಣ 2017ರಲ್ಲಿ 499, 2018ರಲ್ಲಿ 528, 2019ರಲ್ಲಿ 453 ರಷ್ಟಿದೆ. ಇಡೀ ದೇಶದಲ್ಲಿ ಅತೀ ಹೆಚ್ಚು ಪ್ರಕರಣಗಳು ದೆಹಲಿ, ಚಂಢಿಗಡ, ಮಧ್ಯಪ್ರದೇಶ ಮತ್ತು ಛತ್ತೀಸ್ಗಡದಲ್ಲಿ ಅಧಿಕ ವರದಿಯಾಗಿದೆ.

ಅಸಹಜವಾದ ಮಾನಸಿಕ ಒತ್ತಡದ ಪರಿಣಾಮದ ಕಾರಣದಿಂದಾಗಿ ಮಕ್ಕಳು ಎಸಗುವ ಅಪರಾಧಗಳ ಸಂಖ್ಯೆಯ ಹೆಚ್ಚಳಕ್ಕೆ ಕರ್ನಾಟಕ ಸಾಕ್ಷಿಯಾಗಿದೆ. ಲಭ್ಯವಿರುವ ವರದಿಗಳ ಪ್ರಕಾರ 2015 ರಿಂದ 2018 ರವರೆಗೆ ಮಕ್ಕಳ ವಿರುದ್ಧದ ಅಪರಾಧಗಳ ಮೇಲೆ ಹಲವಾರು ಅಪರಾಧಗಳು ದಾಖಾಲಾಗಿವೆ. ಆದರೆ ಅದೇ ಸಮಯದಲ್ಲಿ ಮಕ್ಕಳು ಎಸಗಿದ ಅಪರಾಧಿಗಳಲ್ಲಿಯೂ ಹೆಚ್ಚಳ ಕಂಡು ಬಂದಿದೆ. ಎಸ್‌ಸಿಆರ್‌ಬಿ ವರದಿಗಳ ಪ್ರಕಾರ '2006–2016 ರ ನಡುವಿನ ಅವಧಿಯಲ್ಲಿ, ಬಾಲಾಪರಾಧಿಗಳು ಭಾರತೀಯ ದಂಡ ಸಂಹಿತೆಯಡಿಯಲ್ಲಿ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಒಟ್ಟು ಅಪರಾಧಗಳ ಸಂಖ್ಯೆ 1,48,402 ಆಗಿದ್ದು, ಅದರಲ್ಲಿ 436 ಪ್ರಕರಣಗಳು 2016 ರಲ್ಲಿ ದಾಖಲಾಗಿವೆ. ಅಂಕಿಅಂಶಗಳ ದೃಷ್ಟಿಯಿಂದ, ಹೆಚ್ಚಿನ ಪ್ರಕರಣಗಳು ಕೊಲೆ ಯತ್ನ ಮತ್ತು ಕಳ್ಳತನ ಪ್ರಕರಣಗಳ ಅಡಿಯಲ್ಲಿ ದಾಖಲಾಗಿವೆ.

**ಪರಿವೀಕ್ಷಣಾ ಮಂದಿರಗಳ ಪಾತ್ರ**

ತಪ್ಪಿತಸ್ಥ ಮಕ್ಕಳಿಗೆ ಪುನರ್ವಸತಿ ಕಲ್ಪಿಸುವಲ್ಲಿ ಇದು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಅವರ ಮನಸ್ಸನ್ನು ದೇಶದ ಯೋಗ್ಯ ಪ್ರಜೆಯಾಗಿ ರೂಪಿಸುತ್ತದೆ. ವೀಕ್ಷಣಾ ಮನೆಗಳಲ್ಲಿ ವಾಸಿಸುವ ಮಕ್ಕಳಿಗೆ ಪೋಷಕರ ಆರೈಕೆ ಮತ್ತು ವಾತ್ಸಲ್ಯದ ಅನುಪಸ್ಥಿತಿಯಲ್ಲಿ ಅವರ ಬೆಳವಣಿಗೆಗೆ ಉತ್ತಮ ಸಾಮಾಜಿಕ ವಾತಾವರಣವನ್ನು ಒದಗಿಸಬೇಕು.

**ಬಾಲ ನ್ಯಾಯ ಕಾಯ್ದೆ 2015–ಪರಿವೀಕ್ಷಣಾ ಮಂದಿರಗಳು**

ವಿವಿಧ ಕಾರಣಗಳಿಂದ ನಗರ ಪ್ರದೇಶಗಳಲ್ಲಿ ಮಕ್ಕಳು ಅಪರಾಧ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರುವವರ ಪ್ರಮಾಣ ಹೆಚ್ಚುತ್ತಿದೆ. ಇಂತಹ ಮಕ್ಕಳನ್ನು ಪರಿವೀಕ್ಷಣಾ ಮಂದಿರದ ಉಸ್ತುವಾರಿ ವ್ಯಕ್ತಿ ಬಾಲ ನ್ಯಾಯ ಮಂಡಳಿ (ಜೆಜೆಬಿ) ಮುಂದೆ ವಿಷಯವನ್ನು ತರಬೇಕು ಮತ್ತು ಮಗುವನ್ನು ಜೆಜೆಬಿಯಿಂದ ಆರೈಕೆ ಮತ್ತು ರಕ್ಷಣೆಯ ಅಗತ್ಯವಿರುವ ಮಗು ಎಂದು ಘೋಷಿಸಬೇಕು. ಬಾಲ ನ್ಯಾಯ ಕಾಯ್ದೆ 2015ರ ಪ್ರಕಾರ ರಾಜ್ಯ ಸರ್ಕಾರ ಮಕ್ಕಳ ಪಾಲನಾ ಸಂಸ್ಥೆಗಳ (ಸಿಸಿಐ) ಮೂಲಕ ಶಿಕ್ಷಣ ಅಥವಾ ಚಿಕಿತ್ಸೆಯ ಮೂಲಕ ಆರೋಗ್ಯಕರ ಮತ್ತು ಯೋಗ್ಯವಾದ ಜೀವನವನ್ನು ನಡೆಸಲು ಅವರಿಗೆ ಪುನರ್ವಸತಿ ಕಲ್ಪಿಸಬೇಕಾಗುತ್ತದೆ.

ಬಾಲ ನ್ಯಾಯ ಕಾಯ್ದೆ 2015 ಮತ್ತು ಜೆ ಜೆ ಮಾದರಿ ನಿಯಮಗಳು 2016ರ ಅಡಿಯಲ್ಲಿ ಕಾನೂನು ಯೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗೆ ಸೇವೆಗಳನ್ನು ಒದಗಿಸುವುದು ಪ್ರತಿ ರಾಜ್ಯ ಸರ್ಕಾರದ ಜವಾಬ್ದಾರಿಯಾಗಿದೆ. ಅದರ ಅನುಷ್ಠಾನದ ಕಾರ್ಯವಿಧಾನವನ್ನು ಸ್ಪಷ್ಟವಾಗಿ ಹೇಳುತ್ತವೆ. ಅಂದರೆ ಏಳು ವರ್ಷಕ್ಕಿಂತ ಮೇಲ್ಪಟ್ಟ ಮತ್ತು ಹನ್ನೆರಡು ವರ್ಷಕ್ಕಿಂತ ಕಡಿಮೆ ವಯಸ್ಸಿನ ಆಪಾದಿತ ಮಕ್ಕಳ ಅಪರಾಧ ಮರುಕಳಿಸುವಿಕೆಯ ಸಂದರ್ಭದಲ್ಲಿ ಏನು ಮಾಡಬೇಕು ಎಂಬ ವಿವರಣೆ ನೀಡಿದೆ.

ಐಪಿಸಿ 1860ರ ಸೆಕ್ಷನ್ 82 ಮತ್ತು 83 ಮಗುವಿನ ತಪ್ಪು ಕೃತ್ಯವನ್ನು ಕ್ರಿಮಿನಲ್ ಹೊಣೆಗಾರಿಕೆಯಿಂದ ವಿನಾಯಿತಿ ನೀಡುತ್ತದೆ. ಐಪಿಸಿಯ ಸೆಕ್ಷನ್ 82ರ ಪ್ರಕಾರ, ಏಳು ವರ್ಷದೊಳಗಿನ ಮಗು ಮಾಡುವ ಯಾವುದೇ ತಪ್ಪು ಅಪರಾಧವಲ್ಲ. ಇದಲ್ಲದೆ, 1860 ಐಪಿಸಿಯ ಸೆಕ್ಷನ್ 83ರ ಅಡಿಯಲ್ಲಿ ಒದಗಿಸಿದಂತೆ ಆ ಸಂದರ್ಭದಲ್ಲಿ ಅವರ ನಡವಳಿಕೆಯ ಸ್ವರೂಪ ಮತ್ತು ಪರಿಣಾಮಗಳನ್ನು ನಿರ್ಣಯಿಸಲು ಸಾಕಷ್ಟು ತಿಳುವಳಿಕೆಯನ್ನು ಸಾಧಿಸದ, ಏಳು ವರ್ಷಕ್ಕಿಂತ ಮೇಲ್ಪಟ್ಟ ಮತ್ತು ಹನ್ನೆರಡು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗು ಮಾಡಿದ ತಪ್ಪು ಅಪರಾಧವೇನೂ ಅಲ್ಲ.

ಬಾಲ ನ್ಯಾಯ ಕಾಯ್ದೆ 2015ರ ಪ್ರಕಾರ ವೀಕ್ಷಣಾ ಮನೆ, ವಿಶೇಷ ಮನೆ ಮತ್ತು ಸುರಕ್ಷತೆಯ ಸ್ಥಳದೊಂದಿಗೆ ವ್ಯವಹರಿಸುವ ನಿಬಂಧನೆಗಳನ್ನು ಈ ಕೆಳಗಿನಂತೆ ತಿಳಿಸಲಾಗಿದೆ.

ರಾಜ್ಯ ಸರ್ಕಾರವು ಪ್ರತಿ ಜಿಲ್ಲೆಯಲ್ಲಿ ಸ್ವತಃ ಅಥವಾ ಸ್ವಯಂಸೇವಾ ಅಥವಾ ಸರ್ಕಾರೇತರ ಸಂಸ್ಥೆಗಳ ಮೂಲಕ ಪರಿವೀಕ್ಷಣಾ ಮನೆಗಳನ್ನು ಸ್ಥಾಪಿಸಿ ವಿಚಾರಣೆಯ ಬಾಕಿ ಇರುವ ಕಾನೂನಿನೊಂದಿಗೆ ಸಂಘರ್ಷದಲ್ಲಿದೆ ಎಂದು ಆರೋಪಿಸಲಾದ ಯಾವುದೇ ಮಗುವಿನ ಆರೈಕೆ ಮತ್ತು ಪುನರ್ವಸತಿಯನ್ನು ನೋಡಿಕೊಳ್ಳಬೇಕಾಗಿರುತ್ತದೆ.

**ಪರಿವೀಕ್ಷಣಾ ಮಂದಿರಗಳ ಉದ್ದೇಶಗಳು**

- ವಿಚಾರಣೆಯ ಅವಧಿಯಲ್ಲಿನ ಆಪಾದಿತ, ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಸುರಕ್ಷತೆ, ರಕ್ಷಣೆ ಮತ್ತು ಕಾಳಜಿಯನ್ನು ಖಚಿತಪಡಿಸಿಕೊಳ್ಳುವುದು.

- ಮಗುವಿಗೆ ಕಾನೂನು ನೆರವು ಲಭ್ಯವಾಗಿದೆ ಎಂದು ಖಚಿತಪಡಿಸಿಕೊಳ್ಳುವ ಮೂಲಕ ವಿಚಾರಣೆಯ ಅವಧಿಯಲ್ಲಿ ಮಗುವನ್ನು ಬೆಂಬಲಿಸಲು, ಪ್ರತಿ ವಿಚಾರಣೆಯ ಹಾಜರಾತಿಯನ್ನು ಖಚಿತಪಡಿಸಿಕೊಂಡು ಪ್ರಕರಣದ ಪ್ರಕ್ರಿಯೆ ಮತ್ತು ಪ್ರಗತಿಯನ್ನು ಮಗುವಿಗೆ ವಿವರಿಸುವುದು.

- ಪ್ರತಿ ಮಗುವಿಗೆ ವೈಯಕ್ತಿಕ ಆರೈಕೆ/ಪೋಷಣೆಯ ಯೋಜನೆಯನ್ನು ರೂಪಿಸಲು, ಮಗುವಿನ ಹಿನ್ನೆಲೆ (ಕೌಟುಂಬಿಕ ಪರಿಸ್ಥಿತಿ, ಗೆಳೆಯರು ಮತ್ತು ನೆರೆಹೊರೆಯ ಪ್ರಭಾವಗಳು, ಸಕಾರಾತ್ಮಕ ಪ್ರಭಾವಗಳು), ಅರ್ಥಮಾಡಿಕೊಳ್ಳುವ ಆಧಾರದ ಮೇಲೆ ಸೂಕ್ತ ವಿಧಾನಗಳ ಬಳಕೆಯ ಮೂಲಕ ಅವರ ಅಗತ್ಯತೆಗಳು ಮತ್ತು ಆಸಕ್ತಿಗಳನ್ನು ಸಮಾಲೋಚನೆ ಅವಧಿಗಳು, ಮಗುವಿನೊಂದಿಗೆ ಸಂವಹನ ಸೇರಿದಂತೆ ಕುಟುಂಬ, ಮನೆ ಭೇಟಿಗಳು, ಶಿಕ್ಷಣ ಮತ್ತು ವೃತ್ತಿಪರ ತರಬೇತಿಗಾಗಿ ಯೋಗ್ಯತೆ ಪರೀಕ್ಷೆ, ಮತ್ತು ದೈಹಿಕ ಮತ್ತು ಮಾನಸಿಕ ಆರೋಗ್ಯ ವೃತ್ತಿಪರರೊಂದಿಗೆ ಸಮಾಲೋಚನೆ ನಡೆಸುವುದು.

**ಪರಿವೀಕ್ಷಣಾ ಮಂದಿರಗಳಲ್ಲಿ ಸೇವೆಗಳನ್ನು ಒದಗಿಸುವ ವಿಧಾನ**

ಕಾನೂನಿನೊಂದಿಗೆ ಸಂಘರ್ಷದಲ್ಲಿದೆ ಎಂದು ಆರೋಪಿಸಲಾದ ಮಗು/ ಮಕ್ಕಳನ್ನು ಆಪಾದಿತ ತಪ್ಪಿತಸ್ಥ ಎಂದು ಯಾವುದೇ ಹಂತದಲ್ಲಿಯೂ ಯಾವ ವ್ಯಕ್ತಿಗಳು ಪರಿಭಾವಿಸುವಂತಿಲ್ಲ. ಆದ್ದರಿಂದ, ಪರಿವೀಕ್ಷಣಾ ಮಂದಿರದ ಮೂಲಸೌಕರ್ಯ, ಸೇವೆಗಳು ಅಥವಾ ಕರ್ತವ್ಯ ನಿರ್ವಹಿಸುವ ಪಾಲಕರು ಜೈಲು ಹೋಲುವಂತಿರದೆ ಮಕ್ಕಳೊಂದಿಗೆ ಸಂವಹನ ನಡೆಸಬೇಕು.

ಸೂಕ್ತವಾದ ವಿಧಾನಗಳನ್ನು ಬಳಸಿಕೊಂಡು ಮತ್ತು ವೃತ್ತಿಪರರೊಂದಿಗೆ ಸಮಾಲೋಚಿಸಿ ಪ್ರತಿ ಆಪಾದಿತ ಕಾನೂನಿನೊಂದಿಗೆ ಸಂಘರ್ಷದಲ್ಲಿದೆ ಎಂದು ಆರೋಪಿಸಲಾದ ಮಗು/ ಮಕ್ಕಳ ಅನನ್ಯ ಅಗತ್ಯಗಳನ್ನು ಕಂಡುಹಿಡಿಯಲು ಅನುಕೂಲವಾಗುವ ರೀತಿಯಲ್ಲಿ ಸೇವೆಗಳು ಮತ್ತು ಕಾಳಜಿಯನ್ನು ಒದಗಿಸಲಾಗುತ್ತದೆ ಹಾಗೂ ವಾಸ್ತವ್ಯದ ಅವಧಿಯ ಕೊನೆಯಲ್ಲಿ, ಸ್ಪಷ್ಟವಾದ ಮಾನಿಟರ್ ಸಾಮರ್ಥ್ಯದಿಂದ ವೈಯಕ್ತಿಕ ಯೋಜನೆಯೊಂದಿಗೆ ಮಗುವು ಪುನರ್ವಸತಿ ಹಾದಿಯಲ್ಲಿದೆ,.ಎಂಬುದನ್ನು ಗಮನಿಸಿ ಪುನರ್ವಸತಿಗಾಗಿ ಅವಕಾಶ ಕಲ್ಪಿಸುವುದು.

**ಪರಿವೀಕ್ಷಣಾ ಮಂದಿರಗಳ ಕರ್ತವ್ಯಗಳು**

ಮೂಲಸೌಕರ್ಯಗಳ ಸ್ವರೂಪ, ಸೇವೆಗಳನ್ನು ಒದಗಿಸುವ ವಿಧಾನ, ಸಿಬ್ಬಂದಿ ಮತ್ತು ಮಕ್ಕಳ ನಡುವಿನ ಸ್ವರ ಸಂವಹನ–ಪಾಲನೆ–ಮೂಲಕ ಪರಿವೀಕ್ಷಣಾ ಮಂದಿರಗಳು ಮಕ್ಕಳನ್ನು ಸಂರಕ್ಷಿಸಬೇಕಿರತ್ತದೆ. ಪರಿವೀಕ್ಷಣಾ ಮಂದಿರಗಳು ಆಪಾದಿತ ಮಗುವನ್ನು ತಪ್ಪಿತಸ್ಥ ಎಂದು ಪರಿಭಾವಿಸುವ ಮೂಲಕ ಮಗುವನ್ನು ಬೆಂಬಲಿಸಬೇಕು.

**ಪರಿವೀಕ್ಷಣಾ ಮಂದಿರಗಳ ಸೌಲಭ್ಯಗಳು**

ಪರಿವೀಕ್ಷಣಾ ಮಂದಿರಗಳು ಕೆಳಗಿನ ಸೌಲಭ್ಯಗಳನ್ನು ಹೊಂದಿರಬೇಕಿರುತ್ತದೆ. ಅವುಗಳೆಂದರೆ ಮೂಲ ಸೌಕರ್ಯಗಳು ಮತ್ತು ಭೌತಿಕ ಸೌಲಭ್ಯಗಳ ಪೂರೈಸುವುದು, ಸೂಕ್ತ ಸ್ಥಳದಲ್ಲಿ ಪರಿವೀಕ್ಷಣಾ ಮಂದಿರಗಳ ಸ್ಥಾಪಿಸುವುದು, ಸಂಸ್ಥೆಯ ವಿಸ್ತೀರ್ಣ ಮತ್ತು ಸಾಮರ್ಥ್ಯ, ಕಟ್ಟಡ ಮತ್ತು ಮೈದಾನ, ಸ್ವಾಗತ ಘಟಕ, ಕಚೇರಿ ಪ್ರದೇಶ, ಭೇಟಿ ನೀಡುವ ಪ್ರದೇಶ, ವಸತಿ ನಿಲಯಗಳು, ಸ್ನಾನ, ಲಾಂಡ್ರಿ

ಮತ್ತು ಶೌಚಾಲಯ ಸೌಲಭ್ಯಗಳು, ಅಡಿಗೆ – ಅಡುಗೆ, ಸಂಗ್ರಹಣೆ ಮತ್ತು ಪಾತ್ರೆಗಳನ್ನು ತೊಳೆಯುವ ಪ್ರದೇಶ, ಸ್ಟೋರ್ ರೂಮ್, ಊಟದ ಸ್ಥಳ, ಅಧ್ಯಯನ/ತರಗತಿ ಕೊಠಡಿಗಳು, ಗ್ರಂಥಾಲಯ ಮತ್ತು ಧ್ವನಿ ದೃಶ್ಯ ಕೊಠಡಿ, ವಾತಾಯನ ಮತ್ತು ನೈಸರ್ಗಿಕ ಬೆಳಕು, ಮನರಂಜನಾ ಸ್ಥಳಗಳು – ಒಳಾಂಗಣ ಮತ್ತು ಹೊರಾಂಗಣ, ಸಿಕ್‌ರೂಮ್/ವೈದ್ಯಕೀಯ ಕೊಠಡಿ, ಸಮಾಲೋಚನೆ ಮತ್ತು ಮಾರ್ಗದರ್ಶನ ಕೊಠಡಿ, ಸಾಂಕ್ರಾಮಿಕ ರೋಗಗಳಿರುವ ಮಕ್ಕಳಿಗಾಗಿ ಕ್ವಾರಂಟೈನ್ ಕೊಠಡಿ, ಕುಡಿಯುವ ನೀರು, ಬಾವಿಗಳು ಮತ್ತು ಕುಡಿಯುವ ನೀರಿನ ಶೇಖರಣಾ ತೊಟ್ಟಿಗಳ ಸ್ವಚ್ಛತೆ, ಅಗ್ನಿ ರಕ್ಷಣೆ,ವಿಪತ್ತು ಅಪಾಯವನ್ನು ಕಡಿಮೆ ಮಾಡುವ ಮೂಲಸೌಕರ್ಯ, ವಸ್ತುಗಳು ಮತ್ತು ಉಪಕರಣಗಳು,ಸ್ಥಳಾಂತರಿಸುವ ಮಾರ್ಗಗಳು, ತುರ್ತು ಬೆಳಕು ಮತ್ತು ವಿದ್ಯುತ್ ಸರಬರಾಜು, ಆವರಣದ ನೈರ್ಮಲ್ಯ ಮತ್ತು ನೈರ್ಮಲ್ಯ, ಬಟ್ಟೆ, ಹಾಸಿಗೆ, ಶೌಚಾಲಯಗಳು ಮತ್ತು ಇತರ ವಸ್ತುಗಳನ್ನು ಹೊಂದಿರಬೇಕಾಗಿರುತ್ತದೆ. ಈ ಎಲ್ಲಾ ಸೌಲಭ್ಯಗಳನ್ನು ಸಮರ್ಪಕವಾಗಿ ಪರಿವೀಕ್ಷಣಾ ಮಂದಿರಗಳಿಗೆ ಪೂರೈಸಿದಾಗ ಮಾತ್ರ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಸುಧಾರಣೆ ಮತ್ತು ಪುನರ್ವಸತೀಕರಣ ಸಾಧ್ಯವಾಗುತ್ತದೆ.

**ಉಪಸಂಹಾರ**

ಮಗು ದೈಹಿಕವಾಗಿ ಮತ್ತು ಬೌದ್ಧಿಕವಾಗಿ ಅಪಕ್ವವಾಗಿದ್ದರೆ ಮಗು ಕಠೋರತೆಯ ಆಕ್ರಮಣಗಳಿಗೆ ಗುರಿಯಾಗಬಹುದು ಸುಲಭವಾಗಿ ಮಕ್ಕಳ ಮೃದುತ್ವವನ್ನು ಗಾಯಗೊಳಿಸಬಹುದು. ಕಾನೂನು ಮತ್ತು ಸಮಾಜವು ಅವರ ದುರ್ಬಲ ಮತ್ತು ಸೂಕ್ಷ್ಮ ಮನೋಧರ್ಮವನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಆದರೆ ಮಗುವು ನಿರ್ಲಕ್ಷ್ಯದ ಸರಕಿನ ತುಣುಕಾಗಿ ಉಳಿಯಬಾರದಾಗಿದೆ. ಬಾಲ್ಯಕ್ಕೆ ಅಗತ್ಯ ಕಾಳಜಿ ಮತ್ತು ರಕ್ಷಣೆ ಬೇಕಾಗಿದ್ದು ಕೆಲವು ಮಹತ್ವದ ಕಾನೂನಿನ ಪರಿಕಲ್ಪನೆಗಳಾದ ಕಾನೂನಿನ ಮುಂದೆ ಸಮಾನತೆ, ಜೀವಿಸುವ ಹಕ್ಕು, ಘನತೆಯಿಂದ ಜೀವಿಸುವುದು, ಮಾನವ ಹಕ್ಕುಗಳು, ಸಾಮಾಜಿಕ ನ್ಯಾಯ ಇವುಗಳು ದೊಡ್ಡ ಪಾತ್ರ ನಿರ್ವಹಿಸುತ್ತದೆ. ಜೊತೆಗೆ ಅಂತರಾಷ್ಟ್ರೀಯ ಸಮುದಾಯದ ಗಮನವನ್ನು ಸಳೆಯುವ ಅಗತ್ಯವಿದೆ. ಮಕ್ಕಳ ಅಪರಾಧವು ಪ್ರತಿಕೂಲ ವಾತಾವರಣದ ಉತ್ಪನ್ನವಾಗಿದೆ. ಮಗುವಿನ ಮನಸ್ಥಿತಿ ಹಾಗೂ ಸಾಮಾಜಿಕ ಹಿನ್ನಲೆಯನ್ನಾಧರಿಸಿ ಸುಧಾರಣಾತ್ಮಕ ಸ್ವರೂಪದಲ್ಲಿ ವೈಯಕ್ತಿಕ ಚಿಕಿತ್ಸೆಯನ್ನು ನೀಡುವುದು ಅಗತ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ಆಶಾ ಬಾಜಪೈ. (2003). ಭಾರತದಲ್ಲಿ ಮಕ್ಕಳ ಹಕ್ಕುಗಳು: ಕಾನೂನು, ನೀತಿ ಮತ್ತು ಆಚರಣೆ, ನವದೆಹಲಿ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್.
- *ಮಕ್ಕಳೇಕೆ ಅಪರಾಧಗಳನ್ನು ಮಾಡುತ್ತಾರೆ.* ದೆಹಲಿ ಕಮಿಷನ್ ಫಾರ್ ಪ್ರೊಟೆಕ್ಷನ್ ಆಫ್ ಚೈಲ್ಡ್ ರೈಟ್ಸ್.
- ಪ್ರಿಯಂವತ. ಎಂ. (20030. *ಸಮಾಜದಲ್ಲಿ ಬಾಲಾಪರಾಧಿಗಳ ಮರು–ಸಂಘಟನೆಯ ಕುರಿತು ಒಂದು ಅಧ್ಯಯನ.* ಅಪ್ರಕಟಿತ ಪಿಎಚ್.ಡಿ ಪ್ರಬಂಧ, ಮದ್ರಾಸ್ ವಿಶ್ವವಿದ್ಯಾಲಯ.
- ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೋ. (2021). *ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು.* ಗೃಹ ವ್ಯವಹಾರಗಳ ಸಚಿವಾಲಯ.

- *ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ.* (2015). ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ.
- ಸೆಂಟರ್ ಫಾರ್ ಚೈಲ್ಡ್ ಅಂಡ್ ದಿ ಲಾ. (2018). *ಕರ್ನಾಟಕದಲ್ಲಿ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ನಡುವೆ ಕಾನೂನು ನೆರವಿನ ಪ್ರವೇಶ.* ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ. ಪು.ಸಂ.10–11.
- ಸುಗತ ಮೆನನ್. (2000). *ಯಂಗ್ ಕ್ರಿಮಿನಲ್‌ಗಳು: ಜುವೆನೈಲ್‌ನಲ್ಲಿ ಅಪರಾಧ ಮತ್ತು ಶಿಕ್ಷೆ.* ಡೆಲಿಂಕ್ವೆನ್ಸಿ ಹಾರ್ಡ್ ಬ್ಯಾಕ್ ಮೀಡಿಯಾ.
- ಸೌಮೆನ್ ಆಚಾರ್ಯ. (2017). ದಿ ಸ್ಟಡಿ ಅಫ್ ಜುವೆನೆಲ್ ಡೆಲಿಕ್ವೆನ್ಸಿ ವಿಥ್ ರೆಫರೆನ್ಸ್ ಟು ಸೈಕಲಾಜಿಕಲ್ ಪರ್ಸ್‌ಪೆಕ್ಟಿವ್ ಇನ್ ದ ಜುವೆನೆಲ್ ಹೋಮ್ಸ್ ಆಫ್ ದೆಹಲಿ. *ಇಂಟರ್ನ್ಯಾಷನಲ್ ಜರ್ನಲ್ ಆಫ್ ಅಡ್ವಾನ್ಸ್ಡ್ ರಿಸರ್ಚ್ ಇನ್ ಮ್ಯಾನೇಜ್ಮೆಂಟ್ ಅಂಡ್ ಸೋಶಿಯಲ್ ಸೈನ್ಸಸ್.* 6(11).
- ವಿಶ್ವ ಯುವ ವರದಿ. (2004). *ಬಾಲಾಪರಾಧ: ಯುವ ಜನರ ಜಾಗತಿಕ ಪರಿಸ್ಥಿತಿ.* ನ್ಯೂಯಾರ್ಕ್. ವಿಶ್ವಸಂಸ್ಥೆ.
- ವೇದ್ ಕುಮಾರಿ. (2015). *ಜುವೆನೈಲ್ ಜಸ್ಟೀಸ್ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯಿದೆ: ವಿಮರ್ಶಾತ್ಮಕ ವಿಶ್ಲೇಷಣೆಗಳು.*